# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1042 |
| ಮಾನ್ಯ ಸದಸ್ಯರ ಹೆಸರು | : | ಶ್ರೀ. ಎನ್.ರವಿಕುಮಾರ್,<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 25-07-2024. |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷದಲ್ಲಿ ಮರ ಕಳ್ಳತನದ ಎಷ್ಟು ಪ್ರಕರಣಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರದಿಯಾಗಿವೆ; ಅದರಲ್ಲಿನ ಕಾಡಿನ ಮರಗಳನ್ನು ಕಳ್ಳತನದಿಂದ ಕಡಿದ ಪ್ರಕರಣಗಳೆಷ್ಟು; ಕಳ್ಳತನದಿಂದ ಕಡಿದ ಮರಗಳಲ್ಲಿ ಎಷ್ಟು ಮರಗಳನ್ನು ಶಾಮಿಲ್ಲುಗಳಿಂದ ವಶಪಡಿಸಿಕೊಳ್ಳಲಾಗಿದೆ; (ವಿವರ ನೀಡುವುದು)</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 3 ವರ್ಷದಲ್ಲಿ ಮರ ಕಳ್ಳತನದ ಬಗ್ಗೆ ದಾಖಲಾಗಿರುವ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ದಾಖಲಾದ ಮರ ಕಳ್ಳತನ ಪ್ರಕರಣಗಳ ಸಂಖ್ಯೆ</th><th>ಕಾಡಿನ ಮರಗಳನ್ನು ಕಳ್ಳತನದಿಂದ ಕಡಿದ ಪ್ರಕರಣಗಳ ಸಂಖ್ಯೆ</th><th>ಕಳ್ಳತನದಿಂದ ಕಡಿದ ಮರಗಳಲ್ಲಿ ಶಾಮಿಲ್ಲುಗಳಿಂದ ವಶಪಡಿಸಿಕೊಳ್ಳಲಾದ ಮರಗಳ ಸಂಖ್ಯೆ</th></tr>
<tr><td>2021</td><td>2</td><td>-</td><td>-</td></tr>
<tr><td>2022</td><td>1</td><td>-</td><td>-</td></tr>
<tr><td>2023</td><td>-</td><td>-</td><td>-</td></tr>
<tr><td>2024</td><td>-</td><td>-</td><td>-</td></tr>
</table></td></tr>
<tr><td>ಆ)</td><td>ನವ ಮಂಗಳೂರು ಬಂದರಿನ ನಿರ್ವಸಿತರಿಗೆ ಆಶ್ರಯ ಕಲ್ಪಿಸುವ ದಕ್ಷಿಣ ಕನ್ನಡ ಜಿಲ್ಲೆಯ ಕೃಷ್ಣಾಪುರ ಮತ್ತು ಕಾಟಿಪಳ್ಳ ಗ್ರಾಮಕ್ಕೆ ಪೊಲೀಸ್ ಗಸ್ತು ಎಷ್ಟು ದಿನಗಳಿಗೊಮ್ಮೆ ನಡೆಸಲಾಗುತ್ತಿದೆ;</td><td>1. ಹಗಲು ಗ್ರಾಮ ಗಸ್ತು ಕರ್ತವ್ಯಕ್ಕೆ 10 ದಿನಕ್ಕೊಮ್ಮೆ, ತಿಂಗಳಿಗೆ 3 ಬಾರಿ ಪೊಲೀಸ್ ಗಸ್ತು ಕರ್ತವ್ಯಕ್ಕೆ ನೇಮಿಸಲಾಗುತ್ತಿದೆ.<br>2. ಸುರತ್ಕಲ್ ಪೊಲೀಸ್ ಠಾಣಾ ವ್ಯಾಪ್ತಿಯ ಕಾಟಿಪಳ್ಳ ಮತ್ತು ಕೃಷ್ಣಾಪುರ ಗ್ರಾಮ ವ್ಯಾಪ್ತಿಯಲ್ಲಿ ಠಾಣೆಯ ಎರಡು ಹೊಯ್ಸಳ-112 ವಾಹನಗಳು ದಿನಕ್ಕೆ ಕನಿಷ್ಠ 3-4 ಬಾರಿ ಹಗಲು ಗಸ್ತು ಮತ್ತು ರಾತ್ರಿ ಗಸ್ತು ಮಾಡುತ್ತಿದೆ.<br>3. ರಾತ್ರಿ ಗ್ರಾಮ ಗಸ್ತು ಕರ್ತವ್ಯಕ್ಕೆ ಪ್ರತಿ ದಿನ ಸಿಬ್ಬಂದಿಗಳನ್ನು ನೇಮಿಸಲಾಗುತ್ತಿದೆ.</td></tr>
<tr><td>ಇ)</td><td>ಕೃಷ್ಣಾಪುರದ 5ನೇ ಬ್ಲಾಕಿನಲ್ಲಿರುವ ಆಶಾ ಮರದ ಮಿಲ್ಲು ವಸತಿ ಪ್ರದೇಶದಲ್ಲಿದ್ದು ರಸ್ತೆಯ ಇಕ್ಕೆಲಗಳಲ್ಲಿ ಒಣ ಮರದ ದಿಮ್ಮಿಗಳನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸುತ್ತಿದ್ದು, ಯಾವುದೇ ರೀತಿಯ ಅವಘಡವಾದಲ್ಲಿ ಯಾರನ್ನು ಹೊಣೆಗಾರನ್ನಾಗಿ ಮಾಡಲಾಗುತ್ತದೆ;</td><td>ಮಂಗಳೂರು ನಗರದ ಸುರತ್ಕಲ್ ಠಾಣಾ ವ್ಯಾಪ್ತಿಯ ಕೃಷ್ಣಾಪುರದ 5ನೇ ಬ್ಲಾಕಿನಲ್ಲಿರುವ ಆಶಾ ಮರದ ಮಿಲ್ಲು ವಸತಿ ಪ್ರದೇಶದ ರಸ್ತೆಯ ಬದಿಯಲ್ಲಿ ಪರವಾನಗಿ ಪಡೆದ ಒಣ ಮರದ ದಿಮ್ಮಿಗಳನ್ನು ಇರಿಸಿದ ಬಗ್ಗೆ ತೆರವುಗೊಳಿಸಲು ಮಹಾನಗರ ಪಾಲಿಕೆಯ ಅಧಿಕಾರಿ & ಸಿಬ್ಬಂದಿಯವರು ಹಾಗೂ ಆರೋಗ್ಯಾಧಿಕಾರಿಯವರು ದಿನಾಂಕ: 10.07.2024 ರಂದು ಸ್ಥಳಕ್ಕೆ ಭೇಟಿ ನೀಡಿ ರಸ್ತೆಯ ಬದಿಯಲ್ಲಿರಿಸಿದ ಪರವಾನಗಿ ಇರುವ ಮರದ ದಿಮ್ಮಿಗಳನ್ನು ತೆರವುಗೊಳಿಸುವಂತೆ ಸೂಚಿಸಿದ ಮೇರೆಗೆ ಎರಡು ದಿನಗಳೊಳಗಾಗಿ ತೆರವುಗೊಳಿಸಿರುತ್ತಾರೆ. ಒಣ ಮರದ ದಿಮ್ಮಿಗಳನ್ನು ರಸ್ತೆಯ ಇಕ್ಕೆಲಗಳಲ್ಲಿ ಇರಿಸಿ ತೊಂದರೆಯಾದ ಬಗ್ಗೆ ಇದುವರೆಗೆ ಯಾವುದೇ ದೂರುಗಳು ಬಂದಿರುವುದಿಲ್ಲ.</td></tr>
</table>

| | | |
|---|---|---|
| ಈ) | ರಸ್ತೆಯ ಇಕ್ಕೆಲಗಳಲ್ಲಿ ಮರದ ದಿಮ್ಮಿಗಳನ್ನು ಸಂಗ್ರಹಿಸಲು ಪೊಲೀಸ್ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ನೀಡಲಾಗಿದೆಯೇ: ಈ ಕುರಿತು ಸರ್ಕಾರದ ನಿಲುವೇನು? | ರಸ್ತೆಯ ಇಕ್ಕೆಲಗಳಲ್ಲಿ ಮರದ ದಿಮ್ಮಿಗಳನ್ನು ಸಂಗ್ರಹಿಸಲು ಯಾವುದೇ ತರಹದ ನಿರಾಕ್ಷೇಪಣಾ ಪತ್ರ ನೀಡಲಾಗುವುದಿಲ್ಲ. ರಸ್ತೆಯ ಬದಿಗಳಲ್ಲಿ ಮರದ ದಿಮ್ಮಿಗಳು ಅಥವಾ ಇನ್ನಿತರ ವಸ್ತುಗಳನ್ನು ಇಡದಂತೆ ಕಾಲಕಾಲಕ್ಕೆ ಎಚ್ಚರಿಕೆಯನ್ನು, ಸೂಚನೆಯನ್ನು ನೀಡಲಾಗುತ್ತದೆ. ಒಂದು ವೇಳೆ ಸೂಚನೆಯನ್ನು ಮೀರಿದ್ದಲ್ಲಿ, ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. |

ಸಂಖ್ಯೆ: ಹೆಚ್‌ಡಿ 43 ಪಿಸಿಕ್ಯೂ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು